ವಾರದ ಪತ್ರ

## ಸತ್ಯಕ್ಕೆ ದೂರವಾದ ಸನ್ನಿವೇಶ

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ 'ನಿನಗಾಗಿ'ಯ ಖಳನಾಯಕ ರಾಣಾ ಮತ್ತು ದೇವಿ ತಮ್ಮದೇ ಚಿನ್ನದ ಮಳಿಗೆಯಲ್ಲಿ ಅಣ್ಣನಿಗೆ ಮೋಸ ಮಾಡಿ ಕಳ್ಳತನ ಮಾಡುವ ದೃಶ್ಯ ಹಾಸ್ಯಾಸ್ಪದವಾಗಿದೆ. ಯಾವುದೇ ಮಳಿಗೆಯಲ್ಲೂ ಪ್ರದರ್ಶನಕ್ಕಿಟ್ಟ ಆಭರಣವನ್ನು ಹಾಗೆಯೇ ಬಿಟ್ಟು ಬಾಗಿಲು ಹಾಕುವುದಿಲ್ಲ. ಎಲ್ಲವನ್ನೂ ತೆಗೆದು ಭದ್ರವಾಗಿ ಇಟ್ಟಿರುತ್ತಾರೆ. ಕಳ್ಳತನದ ಸಂದರ್ಭದಲ್ಲಿ ಮಳಿಗೆಯಲ್ಲಿ ಎಲ್ಲವೂ ಯಥಾಸ್ಥಿತಿಯಲ್ಲಿ ಕಣ್ಣಿಗೆ ರಾಚುತ್ತಿತ್ತು. ಈ ದೃಶ್ಯ ನಗೆಪಾಟಲಿಗೆ ಈಡಾಯಿತು. ಇವರ ಎಡವಟ್ಟು ಅವಸರದ ಮಾಘಸ್ನಾನದಂತೆ ಭಾಸವಾಯಿತು.

—ಉಷಾಲಕ್ಷ್ಮೀ ಅರವಿಂದ ಹೊಳ್ಳ, ಬೆಂಗಳೂರು

## ವಾಸ್ತವಕ್ಕೆ ಹಿಡಿದ ಕನ್ನಡಿ

ಇತ್ತೀಚೆಗೆ ಕೆಲವು ವಾಹಿನಿಯವರು ಜೀವನಕ್ಕೆ ಹತ್ತಿರದ ಸಂಚಿಕೆಗಳನ್ನು ರೂಪಿಸುತ್ತಿರುವುದು ಸಂತೋಷ. ಝೀ ಕನ್ನಡದ 'ಲಕ್ಷ್ಮೀನಿವಾಸ' ಚೆನ್ನಾಗಿದೆ. ಮಕ್ಕಳನ್ನು ಬೆಳೆಸಿ ಓದಿಸಿ ಅವರ ಜೀವನಮಟ್ಟ ಚೆನ್ನಾಗಿರುವಂತೆ ತಂದೆತಾಯಿಗಳು ನೋಡಿಕೊಂಡರೂ, ಅವರ ನಿವೃತ್ತಿಯ ಹಣದಲ್ಲೂ ಪಾಲು ಕೇಳುವ ಮಕ್ಕಳು, ಪಾಲಕರನ್ನು ಮನೆಯಿಂದಲೇ ಹೊರ ಹಾಕಿರುವ ಬಗ್ಗೆ ಕೇಳಿರುತ್ತೇವೆ. ಇದೆಲ್ಲವನ್ನು ಈ ಧಾರಾವಾಹಿಯಲ್ಲಿ ತೋರಿಸುತ್ತಿರುವುದು ಸ್ವಾಗತಾರ್ಹ.

—ಕೆ. ರಾಜಶೇಖರ, ಬೆಂಗಳೂರು

## ಸಂಬಂಧದ ಭಾವ ಬೆಸುಗೆ

ಪೋಷಕರು ವೃದ್ಧಾಪ್ಯದಲ್ಲಿ ಇದ್ದಾಗ ಮಕ್ಕಳು ತಮ್ಮ ಕರ್ತವ್ಯವನ್ನು ಮರೆತರೆ ಅದಕ್ಕೆ ಸೂಕ್ತ ಪಾಠವನ್ನು ಕಲಿಸಬಹುದು ಎನ್ನುವ ಸಂಗತಿಯನ್ನು ಝೀ ಕನ್ನಡದ 'ಲಕ್ಷ್ಮೀನಿವಾಸ' ಮನಮುಟ್ಟುವಂತೆ ದಾಟಿಸಿತು. ಬದಲಾದ ದಿನಗಳಲ್ಲಿ ಬೆಳೆದ ಮಕ್ಕಳು ಮತ್ತು ಪಾಲಕರ ಸಂಬಂಧ ಯಾವ ರೀತಿ ಇದೆ ಎನ್ನುವುದನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಮಾನವೀಯ ಸಂಬಂಧವನ್ನು ಮರೆತು ಹಣದ ದೃಷ್ಟಿಯಲ್ಲೇ ಎಲ್ಲದನ್ನು ನೋಡುವ ಸಂದರ್ಭದಲ್ಲಿ ಕಥೆಗೆ ಈ ರೀತಿಯ ಮಾನವೀಯ ಸ್ಪರ್ಶ ನೀಡಿರುವುದು ಸೂಕ್ತ ಎಂದೆನಿಸಿತು. ಇದನ್ನು ಕುಟುಂಬದ ಎಲ್ಲರೂ ಕುಳಿತು ನೋಡಬಹುದು.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಸಂಗೀತ ರಸಗಂಗೆ

ಹಿಂದೂಸ್ತಾನಿ ಶಾಸ್ತ್ರೀಯ ಕಲಾವಿದ ಪಂ. ಹುಮಾಯೂನ್ ಹರ್ಲಾಪುರ ಅವರ ಸಂದರ್ಶನ ಚೆನ್ನಾಗಿತ್ತು. ಅವರ ಶಾಸ್ತ್ರೀಯ ಗಾಯನ, ಸಂತ ಶಿಶುನಾಳ ಶರೀಫರ ಪದಗಳು, ದಾಸರ ಪದ, ಭಾವಗೀತೆಗಳು ತುಂಬ ಇಂಪಾಗಿದ್ದವು. ಮೂಲತಃ ಗ್ವಾಲಿಯರ್ ಮತ್ತು ಕಿರಾನ ಘರಾನಾದ ಶೈಲಿಯ ಗಾಯಕರು. ಆದರೂ ಎಲ್ಲ ರೀತಿಯ ಗಾಯನ ಕಾರ್ಯಕ್ರಮ ನಡೆಸುವರೆಂಬ ವಿಷಯ ಸಂತೋಷ ನೀಡಿತು.

ಸಂಗೀತಕ್ಕೆ ಧರ್ಮದ ಕಟ್ಟುಪಾಡಿಲ್ಲ. ಹರ್ಲಾಪುರ ತಮ್ಮ ಮಗ ನಿಶಾದ್ ಜೊತೆಗೆ ಅನೇಕರಿಗೆ ಸಂಗೀತ ಕಲಿಸುತ್ತಿದ್ದಾರೆ. ಕರ್ನಾಟಕದ ಹಲವೆಡೆ ತಮ್ಮ ತಂಡದ ಜತೆ ಕಾರ್ಯಕ್ರಮ ನೀಡುತ್ತಿರುವುದು ಶ್ಲಾಘನೀಯ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಮುಗಿಯದ ಕಥೆ

ಕಲರ್ಸ್ ವಾಹಿನಿಯ 'ಭಾಗ್ಯಲಕ್ಷ್ಮಿ'ಯ ತಿರುವು ನೋಡಿದರೆ ಮುಗಿಸುವ ಸುಳಿವೇ ಸಿಕ್ಕುತ್ತಿಲ್ಲ! 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎನ್ನುವಂತೆ ಕಾಮತ್ ಅವರ ದುಡ್ಡನ್ನು ಭಾಗ್ಯ ಅವರಿಗೇ ವಾಪಸ್ ಕೊಟ್ಟಿದ್ದರಲ್ಲಿ ಅತಿಶಯವೇನಿಲ್ಲ. ಅಷ್ಟೊಂದು ದೊಡ್ಡ ಸಮಾರಂಭದಲ್ಲಿ ಹಾಡಿಹೊಗಳಿ ಸನ್ಮಾನಿಸಿದ್ದು ವಿಪರೀತವೆನಿಸಿತು.

—ಸೀತಾ ಕೇಶವ, ಸಿಡ್ನಿ

## ವರನಿಲ್ಲದೆ ಸಂಭ್ರಮ!

ಝೀ ಕನ್ನಡದ 'ಮಹಾನಟಿ' ಹಾಗೂ 'ನಾವು ನಮ್ಮವರು' ಮಹಾಸಂಗಮದಲ್ಲಿ ನಿರೂಪಕಿ ಅನುಶ್ರೀ ಮದುವೆಯನ್ನು ಸಂಭ್ರಮಿಸಲಾಯಿತು. ಕಾರ್ಯಕ್ರಮದಲ್ಲಿ ಅಪ್ಪು ಅವರನ್ನು ನೆನೆದು ಅನುಶ್ರೀ ಭಾವುಕರಾದರು. ವಿವಾಹ ಮಹೋತ್ಸವವನ್ನು ಅದ್ದೂರಿಯಾಗಿ ನೆರವೇರಿಸಿದ ವರುಣ್ ಅವರನ್ನು ಅನುಶ್ರೀ ಅಭಿನಂದಿಸಿದರು.

ರಮೇಶ್, ಶರಣ್, ತರುಣ್ ಹಾಗೂ ತಾರಾ, ಪ್ರೇಮಾ, ಅಮೂಲ್ಯ ಈ ಸಂದರ್ಭಕ್ಕೆ ಸಾಕ್ಷಿಯಾದರು. ಆದರೆ ವಧು ಅನುಶ್ರೀ ಅವರನ್ನು ವರಿಸಿದ ರೋಷನ್ ಅವರೇ ಬಂದಿರಲಿಲ್ಲ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ



## ಮನಗೆದ್ದ ಮಹಾಸಂಗಮ

ಝೀ ಕನ್ನಡದ 'ನಾವು ನಮ್ಮವರು' ಮತ್ತು 'ಮಹಾನಟಿ' ಮಹಾಸಂಗಮ ಬಹಳ ಚೆನ್ನಾಗಿ ಮೂಡಿಬಂತು. ಅದರಲ್ಲಿ ನಿರೂಪಕಿ ಅನುಶ್ರೀ ಅವರಿಗೆ ಸಲ್ಲಿಸಿದ ಅಭಿನಂದನೆ ಮನಮುಟ್ಟುವಂತೆ ಇತ್ತು.

—ಎಸ್. ವಿಜಯಕುಮಾರಿ

## ರಮೇಶ್ ಅರವಿಂದ್ '40'

ಝೀ ಕನ್ನಡದ 'ಮಹಾನಟಿ' ಹಾಗೂ 'ನಾವು ನಮ್ಮವರು' ರಿಯಾಲಿಟಿ ಶೋಗಳ ಮಹಾಸಂಗಮ ಹಲವು ವಿಶೇಷಗಳಿಗೆ ಸಾಕ್ಷಿಯಾಗಿತ್ತು. ಅನುಶ್ರೀ ಅವರ ವಿವಾಹ ಸಂಭ್ರಮದ ದೃಶ್ಯ ಚೆನ್ನಾಗಿತ್ತು. ರಮೇಶ್ ಅರವಿಂದ್ ಅವರ ಸಿನಿ ಪಯಣಕ್ಕೆ 40 ವರ್ಷ ತುಂಬಿರುವುದರ ಜೊತೆ ಅವರ ಹುಟ್ಟುಹಬ್ಬದ ಹಿನ್ನೆಲೆಯ ಸಂಭ್ರಮ, ಶರಣ್ ಅವರ ಸಿನಿಮಾ ನಟನೆಗೂ 25 ವರ್ಷ ತುಂಬಿದೆ. ಅವರ ಮಾತುಕತೆ ಚೆನ್ನಾಗಿತ್ತು. ಇದರ ಜೊತೆ ಜನ್ಮ ದಿನ ಆಚರಣೆ ಮಾಡಿದ್ದು ಖುಷಿ ಕೊಟ್ಟಿತು. ಸ್ಪರ್ಧಿಗಳು ತಮ್ಮ ಅಮೋಘ ನೃತ್ಯ, ನಟನೆಯಿಂದ ರಂಜಿಸಿದರು.

—ಭಾರತೀ ಗಂಗಾಧರ್, ಬೆಂಗಳೂರು.

## ಡಬಲ್ ಮೀನಿಂಗ್ ಶೋ

ಟೀವಿ ಕಾಮಿಡಿ ಶೋಗಳಲ್ಲಿ ದ್ವಂದ್ವಾರ್ಥದ ಸಂಭಾಷಣೆಗಳು ವಿಜೃಂಭಿಸುತ್ತಿವೆ. ಇದರಿಂದ ಹಾಸ್ಯ ಅಪಹಾಸ್ಯವಾಗಿ ಪ್ರೇಕ್ಷಕರ ಸಹನೆಗೆ ಸವಾಲಾಗಿದೆ. ಸಾಧುಕೋಕಿಲ, ಶ್ರುತಿ ತೀರ್ಪುಗಾರರಾಗಿದ್ದ ಶೋ ಒಂದರ ಸನ್ನಿವೇಶದಲ್ಲಿ ಟೀ ಕೊಡುವ ಮಾತುಕತೆ ಚೆನ್ನಾಗಿರಲಿಲ್ಲ.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

## ಮರುಪ್ರಸಾರದಲ್ಲಿ ಪುನರಾವರ್ತನೆ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ತಪ್ಪದೇ ನೋಡುವುದು ನನ್ನ ಹವ್ಯಾಸ. ಅದರಿಂದ ಅನೇಕ ಹೊಸ ವಿಷಯಗಳನ್ನು ತಿಳಿಯುತ್ತೇನೆ. ಇಂದಿನ ಕಾರ್ಯಕ್ರಮವನ್ನು ಮರುದಿನ ಇಳಿಹೊತ್ತು 4 ಗಂಟೆಗೆ ಮರು ಪ್ರಸಾರ ಮಾಡುತ್ತಾರೆ. ಇತ್ತೀಚೆಗೆ ಒಮ್ಮೆ ಮರುಪ್ರಸಾರವಾದ ಕಾರ್ಯಕ್ರಮವನ್ನೆ ಮತ್ತೆ ಪ್ರಸಾರ ಮಾಡಿದರು. ಐದು ನಿಮಿಷ ವೀಕ್ಷಿಸಿ ನಾನು ಚಾನಲ್ ಬದಲಿಸಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ